# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಶಿವಮೊಗ್ಗ ಜಿಲ್ಲೆಯ ಗ್ರಾಮಗಳ ಪಟ್ಟಿಗೆ ಅನುಮೋದನೆ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2.ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಜಿಪಂಶಿ/ಯೋಶಾ/ಸುಗ್ರಾಯೋ/ಹಂತ 5/12/2012-13 ದಿ:29.09.2012.

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಶಿವಮೊಗ್ಗ ಜಿಲ್ಲೆಯ **(7 ತಾಲ್ಲೂಕುಗಳ)** ಶಿವಮೊಗ್ಗ ತಾಲ್ಲೂಕಿನ 10 ಗ್ರಾಮಗಳು, ಭದ್ರಾವತಿ ತಾಲ್ಲೂಕಿನ 9 ಗ್ರಾಮಗಳು, ತೀರ್ಥಹಳ್ಳಿ ತಾಲ್ಲೂಕಿನ 14 ಗ್ರಾಮಗಳು, ಸಾಗರ ತಾಲ್ಲೂಕಿನ 14 ಗ್ರಾಮಗಳು, ಹೊಸನಗರ ತಾಲ್ಲೂಕಿನ 13 ಗ್ರಾಮಗಳು, ಶಿಕಾರಿಪುರ ತಾಲ್ಲೂಕಿನ 11 ಗ್ರಾಮಗಳು ಮತ್ತು ಸೊರಬ ತಾಲ್ಲೂಕಿನ 16 ಗ್ರಾಮಗಳು **ಒಟ್ಟು 87 ಗ್ರಾಮಗಳನ್ನು** ಆಯ್ಕೆ ಮಾಡಿ ಶಾಸಕರಿಂದ ಶಿಫಾರಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಅವರು ಓದಲಾಗಿದೆ (3)ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಶಿವಮೊಗ್ಗ ಜಿಲ್ಲೆಯ 7 **ತಾಲ್ಲೂಕುಗಳ ಒಟ್ಟು 87** ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:91:ಸುಗ್ರಾಯೋ:2012. ಬೆಂಗಳೂರು, ದಿನಾಂಕ:10.10.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯ **7 ತಾಲ್ಲೂಕುಗಳ ಒಟ್ಟು 87 ಗ್ರಾಮಗಳಿಗೆ** ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಶಿವಮೊಗ್ಗ
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು
10. ಹೆಚ್ಚುವರಿ.

ಅನುಬಂಧ

ಶಿವಮೊಗ್ಗ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಗಾಗಿ ಅನುಮೋದಿತ ಗ್ರಾಮಗಳ ಪಟ್ಟಿ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:91:ಸುಗ್ರಾಯೋ:2012 ದಿ:10.10.2012

ಜಿಲ್ಲೆ: ಶಿವಮೊಗ್ಗ

| ಕ್ರಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ನಿಗದಿಪಡಿಸ ಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಶಿವಮೊಗ್ಗ | 1 | ಕಡೇಕಲ್ | 1424 | 36.37 |
| | | 2 | ಗಾಜನೂರು | 1474 | 37.65 |
| | | 3 | ಹೊನ್ನಾಪುರ | 794 | 20.28 |
| | | 4 | ಕೋಹಳ್ಳಿ | 3848 | 98.29 |
| | | 5 | ಹಾಡೋನಹಳ್ಳಿ | 1624 | 41.48 |
| | | 6 | ಸೂಗೂರು | 1785 | 45.59 |
| | | 7 | ಸೋಗಾನೆ | 3313 | 84.62 |
| | | 8 | ಬೇಡರ ಹೊಸಹಳ್ಳಿ | 1530 | 39.08 |
| | | 9 | ಕೊಮ್ಮನಾಳ್ | 1501 | 38.34 |
| | | 10 | ಪಿಳ್ಳಂಗೆರೆ | 1891 | 48.30 |
| | | | ಒಟ್ಟು | **19184** | **490.00** |
| 2 | ಭದ್ರಾವತಿ | 1 | ಕಾಗೆಕೊಡಮಗ್ಗೆ | 2158 | 47.31 |
| | | 2 | ಬಸಲೀಕಟ್ಟೆ | 1916 | 42.00 |
| | | 3 | ಹಳ್ಳಿಕೆರೆ | 1891 | 41.45 |
| | | 4 | ವೀರಾಪುರ | 3068 | 67.25 |
| | | 5 | ಗೋಣಿಬೀಡು | 1240 | 27.18 |
| | | 6 | ಅಗರದಹಳ್ಳಿ | 3838 | 84.13 |
| | | 7 | ಕೊಪ್ಪ | 3444 | 75.50 |
| | | 8 | ಯಡೇಹಳ್ಳಿ | 4180 | 91.63 |
| | | 9 | ನಿಂಬೆಗೊಂದಿ | 1576 | 34.55 |
| | | | ಒಟ್ಟು | **23311** | 511.00 |

| | | | | | |
|---|---|---|---|---|---|
| 3 | ತೀರ್ಥಹಳ್ಳಿ | 1 | ಹೊಸೂರು | 1498 | 37.71 |
| | | 2 | ಅರೇಹಳ್ಳಿ | 1237 | 31.14 |
| | | 3 | ಹುಣಸವಳ್ಳಿ | 1223 | 30.79 |
| | | 4 | ಶಂಕರಾಪುರ | 1168 | 29.40 |
| | | 5 | ಕೊಳಿಗೆ | 1124 | 28.30 |
| | | 6 | ಯಡೇಹಳ್ಳಿ | 1109 | 27.92 |
| | | 7 | ಬಿದರಗೋಡು | 1064 | 26.79 |
| | | 8 | ಕನ್ನಂಗಿ | 1050 | 26.43 |
| | | 9 | ಹೊಸಬೀಡು | 962 | 24.22 |
| | | 10 | ಬೆಕ್ಷಂಸಿಕೆಂಚಿಗುಡ್ಡೆ | 953 | 23.99 |
| | | 11 | ಯೋಗಿಮಳಲಿ | 935 | 23.54 |
| | | 12 | ಮಲ್ಲೇಸರ | 935 | 23.54 |
| | | 13 | ಕೆಳಕೆರೆ | 884 | 22.25 |
| | | 14 | ಕೊಕ್ಕೋಡು | 476 | 11.98 |
| | | | ಒಟ್ಟು | **14618** | **368.00** |
| 4 | ಸಾಗರ | 1 | ಬೇಳೂರು | 892 | 20.68 |
| | | 2 | ಭೀಮನೇರಿ | 1344 | 31.16 |
| | | 3 | ಶಿರುವಾಳ | 1256 | 29.12 |
| | | 4 | ಬೆಳ್ಳಂದೂರು | 880 | 20.40 |
| | | 5 | ಬ್ರಾಹ್ಮಣಮಂಚಾಲೆ | 896 | 20.77 |
| | | 6 | ಚೆನ್ನಗೊಂಡ | 1079 | 25.01 |
| | | 7 | ಚಿಕ್ಕನಲ್ಲೂರು | 2055 | 47.64 |
| | | 8 | ಚೆಪ್ಲಿಲಿಂಗದಹಳ್ಳಿ | 993 | 23.02 |
| | | 9 | ನಾಗವಳ್ಳಿ | 1102 | 25.55 |
| | | 10 | ಕಣ್ಣೂರು | 1033 | 23.95 |
| | | 11 | ಮಾಳೂರು | 1222 | 28.33 |
| | | 12 | ತಡಗಳಲಿ | 1834 | 42.51 |
| | | 13 | ಕುಗ್ವೆ | 1222 | 28.33 |
| | | 14 | ಬರದವಳ್ಳಿ | 1275 | 29.56 |
| | | | ಒಟ್ಟು | **17083** | **396.00** |

| | | | | | |
|---|---|---|---|---|---|
| 5 | ಹೊಸನಗರ | 1 | ಸುಳುಗೋಡು | 1352 | 34.27 |
| | | 2 | ಅಮೃತ | 1158 | 29.36 |
| | | 3 | ಸೋನಲೆ | 1154 | 29.25 |
| | | 4 | ಮಂಜಗಳಲೆ | 1111 | 28.16 |
| | | 5 | ಕಲ್ಲೂರು | 394 | 9.99 |
| | | 6 | ಬಸವಾಪುರ | 832 | 21.09 |
| | | 7 | ಸುತ್ತಾ | 498 | 12.62 |
| | | 8 | ದೋಬೈಲು | 956 | 24.23 |
| | | 9 | ಅಲಗೇರಿಮಂಡ್ರಿ | 1100 | 27.89 |
| | | 10 | ಹೊಸನಾಡು | 700 | 17.75 |
| | | 11 | ಮುಂಬಾರು | 1241 | 31.46 |
| | | 12 | ಕೆಂಚನಾಲ | 979 | 24.82 |
| | | 13 | ಬಾಳೂರು | 951 | 24.11 |
| | | | ಒಟ್ಟು | **12426** | **315.00** |
| 6 | ಶಿಕಾರಿಪುರ | 1 | ಮತ್ತಿಕೋಟೆ | 2907 | 69.59 |
| | | 2 | ಸಾಲೂರು | 3648 | 87.32 |
| | | 3 | ನೆಲವಾಗಿಲು | 1859 | 44.50 |
| | | 4 | ತೊಗರ್ಸಿ | 1814 | 43.42 |
| | | 5 | ಬಗನಕಟ್ಟೆ | 1388 | 33.23 |
| | | 6 | ಗುಡ್ಡದತುಮ್ಮಿನಕಟ್ಟೆ | 1246 | 29.83 |
| | | 7 | ಕುಸ್ಕೂರು | 1305 | 31.24 |
| | | 8 | ಸುಣ್ಣದಕೊಪ್ಪ | 1212 | 29.01 |
| | | 9 | ಮುಗಳಗೆರೆ | 1920 | 45.96 |
| | | 10 | ತಡಸನಹಳ್ಳಿ | 1260 | 30.16 |
| | | 11 | ತಡಗಣಿ | 1493 | 35.74 |
| | | | ಒಟ್ಟು | **20052** | **480.00** |

| | | | | | |
|---|---|---|---|---|---|
| 7 | ಸೊರಬ | 1 | ಕಾತುವಳ್ಳಿ | 1770 | 46.28 |
| | | 2 | ಎಣ್ಣೇಕೊಪ್ಪ | 1638 | 42.83 |
| | | 3 | ಕಮನವಳ್ಳಿ | 1501 | 39.25 |
| | | 4 | ಚಿಟ್ಟೂರು | 1006 | 26.30 |
| | | 5 | ಗಿಣಿವಾಲ | 1346 | 35.19 |
| | | 6 | ಅಂದವಳ್ಳಿ | 1154 | 30.17 |
| | | 7 | ದ್ವಾರಹಳ್ಳಿ | 853 | 22.30 |
| | | 8 | ಶಿಗ್ಗಾ | 1495 | 39.09 |
| | | 9 | ಅರತಲಗಡ್ಡೆ | 527 | 13.78 |
| | | 10 | ಬೆಣ್ಣೇಗೇರಿ | 1123 | 29.36 |
| | | 11 | ತಲಗಡ್ದೆ | 1752 | 45.81 |
| | | 12 | ನೆಗೆವಾಡಿ | 1922 | 50.25 |
| | | 13 | ಮುಟುಗುಪ್ಪೆ | 1003 | 26.22 |
| | | 14 | ಮೂಗೂರು | 964 | 25.20 |
| | | 15 | ಹಿರೇಚೌಟಿ | 907 | 23.71 |
| | | 16 | ಚಿಕ್ಕಚೌಟಿ | 583 | 15.24 |
| | | | ಒಟ್ಟು | **19544** | **511.00** |
| | | | ಜಿಲ್ಲೆಯ ಒಟ್ಟು ಮೊತ್ತ | **126218** | **3071.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ